ಆಗಸ್ಟ್ 2024

# ಅದಮ್ಯ ಚೇತನ



ದಿ. ಶ್ರೀ ಅನಂತಕುಮಾರ
ಸಂಸ್ಥಾಪಕರು, ಅದಮ್ಯಚೇತನ,
ಮಾಜಿ ಕೇಂದ್ರ ಸಚಿವರು ಮತ್ತು ಲೋಕಸಭಾ ಸದಸ್ಯರು

ಓ ನನ್ನ ಚೇತನ ಆಗು ನೀ ಅನಿಕೇತನ

## ಅಯೋಧ್ಯೆಯಲ್ಲಿ ಅರಳುತ್ತಿದೆ, 'ಅದಮ್ಯ ಚೇತನ'ದ ಅಶೋಕವನ!



ಕಳೆದ ಜುಲೈ 22ರಂದು ಕನ್ನಡಿಗರ ಪುಟ್ಟ ಗುಂಪೊಂದು ಅಯೋಧ್ಯೆಯಲ್ಲಿ ಪುಟ್ಟಪುಟ್ಟ ಗಿಡಗಳನ್ನು ನೆಡುವ ಕೆಲಸದಲ್ಲಿ ತೊಡಗಿತ್ತು. ವಾಲ್ಮೀಕಿ ರಾಮಾಯಣದಲ್ಲಿ ಬರುವ ಅಶೋಕ ವೃಕ್ಷ ಮತ್ತು ಶಿಂಶುಪಾ ವೃಕ್ಷಗಳ ಸಸಿಗಳು ಅಲ್ಲಿ ಸಾಲಿನಲ್ಲಿ ನಿಂತಿದ್ದವು. ಈ ಕಾರ್ಯಕ್ರಮಕ್ಕೆಂದೇ ಬೆಂಗಳೂರಿನ 'ಅದಮ್ಯ ಚೇತನ' ಸಂಸ್ಥೆ 300 ಸಸಿಗಳನ್ನು ರೈಲಿನ ಮೂಲಕ ಅಯೋಧ್ಯೆಗೆ ತರಿಸಿತ್ತು. ಗಾಂಧೀಜಿ ಆರಂಭಿಸಿದ 'ಸತ್ಯಾಗ್ರಹ'ದ ಹಾಗೆಯೇ ಈಗಿನ ಕಾಲದಲ್ಲಿ 'ಸಸ್ಯಾಗ್ರಹ'ವನ್ನು ನಡೆಸಬೇಕೆಂದು ಈ ಸಂಸ್ಥೆಯ ರೂವಾರಿ ಮತ್ತು ಕೇಂದ್ರ ಸಚಿವರೂ ಆಗಿದ್ದ ಶ್ರೀ ಅನಂತ ಕುಮಾರ್ ಅವರು 2016ರಲ್ಲೇ ಇಂಥದ್ದೊಂದು ಚಳವಳಿಯನ್ನು ಆರಂಭಿಸಿದ್ದರು. ಅಂದಿನಿಂದ ಸತತವಾಗಿ 448 ವಾರಗಳಿಂದ ಕರ್ನಾಟಕದ ಒಂದಲ್ಲ ಒಂದು ಕಡೆ ಪ್ರತಿ ಭಾನುವಾರ ಗಿಡ ನೆಡುವ ಕೆಲಸವನ್ನು 'ಅದಮ್ಯ ಚೇತನ'ಸಂಸ್ಥೆ ನಡೆಸಿಕೊಂಡು ಬಂದಿದೆ. ಇದೇ ಮೊದಲ ಬಾರಿಗೆ ದೂರದ ಉತ್ತರ ಪ್ರದೇಶದ ಅಯೋಧ್ಯಾ ನಗರದಲ್ಲಿ (ಅಲ್ಲಿನ ಅವಧ್ ವಿಶ್ವವಿದ್ಯಾಲಯದ ಐಇಟಿ ಕ್ಯಾಂಪಸ್ಸಿನಲ್ಲಿ ಮತ್ತು ಧಾಬಾಸೆಮರ್ ಶಾಲಾ ಆವರಣದಲ್ಲಿ) ವೃಕ್ಷಾರೋಪಣ ಕೆಲಸ ನಡೆಯಿತು. 'ರಾಮ ಜನ್ಮಭೂಮಿ ಟ್ರಸ್ಟ್'ನ ಸದಸ್ಯ ಗೋಪಾಲ್ ಜಿ ಮತ್ತು ಇತರ ಗಣ್ಯರ ಸಮಕ್ಷಮದಲ್ಲಿ ಡಾ. ತೇಜಸ್ವಿನಿ ಅನಂತಕುಮಾರ್ ಅವರು ಚಾಲನೆ ನೀಡಿದರು. ಮುಂದಿನ ಮೂರು ವರ್ಷಗಳ ಕಾಲ, ಅಂದರೆ ಸಸಿಗಳು ಬೇರಿಳಿಸಿ, ಬಲಗೊಳ್ಳುವವರೆಗೆ ಪೋಷಣೆಯ ಜವಾಬ್ದಾರಿಯನ್ನು 'ಅದಮ್ಯ ಚೇತನ' ಸಂಸ್ಥೆಯೇ ಹೊರಲಿದೆ ಎಂತಲೂ ಅವರು ತಿಳಿಸಿದರು. ಅಂತೂ ಲಂಕೆಯ ಅಶೋಕವನದಲ್ಲಿ ಬೆಳೆದಿದ್ದ ವೃಕ್ಷಗಳ ಸಂತಾನ ಈಗ ಅಯೋಧ್ಯೆಯ ಬಾಲರಾಮನ ಸನ್ನಿಧಿಯಲ್ಲೂ ಚಿಗುರುವಂತಾಯಿತು!

## ಬಲೂನ್‌ಗಳ ಬಳಕೆಯ ಸಂತಸ ಮತ್ತು ಸಂಕಟ




ಸ್ವಾತಂತ್ರ್ಯೋತ್ಸವದಲ್ಲಿ, ಜಾತ್ರೆಯಲ್ಲಿ ಅಥವಾ ಜನ್ಮದಿನದ ಸಂತಸದ ಸಂದರ್ಭದಲ್ಲಿ ಎಲ್ಲೆಲ್ಲೂ ನಾವು ಬಣ್ಣಬಣ್ಣದ ಬಲೂನುಗಳನ್ನು ಕಾಣುತ್ತೇವೆ. ಇವು ಕ್ರಮೇಣ ಒಡೆದು, ಚಿಂದಿಯಾಗಿ ಮಣ್ಣಿಗೆ, ನೀರಿಗೆ ಸೇರುತ್ತವೆ. ಪಕ್ಷಿಗಳು ಮತ್ತು ಮೇಯುವ ಪ್ರಾಣಿಗಳು ಅಥವಾ ಜಲಚರಗಳು ಗೊತ್ತಿಲ್ಲದೆ ಬಲೂನುಗಳ ಚೂರನ್ನು ನುಂಗಿಬಿಡುತ್ತವೆ. ಆಮೇಲೆ ಅದು ಜೀರ್ಣವಾಗದೆ, ದೇಹದಿಂದ ಹೊರಕ್ಕೂ ಬಾರದೆ ಅವು ಸಂಕಟಪಡುತ್ತವೆ. ನಮ್ಮ ಕ್ಷಣಿಕ ಸಂತಸಕ್ಕೆ ಅವು ಜೀವನವಿಡೀ ಸಂಕಟಪಡಬಾರದು ತಾನೆ? ರಬ್ಬರ್ ಮತ್ತು ಪ್ಲಾಸ್ಟಿಕ್ ಮಿಶ್ರಿತ ಬಲೂನುಗಳ ಬದಲು ಬಟ್ಟೆ, ಎಲೆ, ಹೂವು, ಹತ್ತಿಯ ಬದಲೀ ವಸ್ತುಗಳನ್ನು ಅಲಂಕಾರಕ್ಕೆ ಬಳಸೋಣವೆಂದು ನೀವು ನಿರ್ಧರಿಸಿದರೆ ನಿಸರ್ಗಕ್ಕೂ ಒಳ್ಳೆಯದು.

### ಸುಭಾಷಿತ

**नमन्ति फलिनो वृक्षाः नमन्ति गुणिनो जनाः।**
**शुष्ककाष्ठानि मूर्खाश्च न नमन्ति कदाचन॥**

ನಮಂತಿ ಫಲಿನೋ ವೃಕ್ಷಾಃ ನಮಂತಿ ಗುಣಿನೋ ಜನಾಃ।
ಶುಷ್ಕಕಾಷ್ಠಶ್ಚಮೂರ್ಖಸ್ಯ ನ ನಮಂತಿ ಕದಾಚನ ॥

ಫಲತುಂಬಿದ ವೃಕ್ಷಗಳು ತಲೆಬಾಗಿಸುತ್ತವೆ; ಸದ್ಗುಣಿಗಳೂ ತಲೆಬಾಗಿಸುತ್ತಾರೆ; ಆದರೆ ಒಣ ಕಟ್ಟಿಗೆ ದಿಮ್ಮಿಗಳು ಮತ್ತು ಮೂರ್ಖರು ಎಂದೂ ತಲೆಬಾಗಿಸರು.

## ಕೊಳಲು, ಮುರಳಿ, ವೇಣು, ವಂಶಿ...

ತುಳಸಿ, ನವಿಲುಗರಿ, ಬೆಣ್ಣೆಯ ಮಡಕೆ, ಕೊಳಲು, ಚಕ್ರ ಇವೆಲ್ಲ ಒಂದೇ ದೇವರಿಗೆ ಮೀಸಲಿವೆ. ಆಗಸ್ಟ್ 26ರಂದು ನಾಡಿನ ಸಹಸ್ರಾರು ಅಮ್ಮಂದಿರು ತಮ್ಮ ಮಗುವಿಗೆ ಶ್ರೀಕೃಷ್ಣನ ವೇಷ ಹಾಕಿ, ಈ ಎಲ್ಲ ಸಾಮಗ್ರಿಗಳನ್ನೂ ಅಂದವಾಗಿ ಜೋಡಿಸಿ ಪ್ರದರ್ಶನಕ್ಕೆ ಕರೆತರುತ್ತಾರೆ. ಅಂದಹಾಗೆ, ಕೊಳಲಿಗೂ ಅದೆಷ್ಟು ಹೆಸರುಗಳಿವೆ ನೋಡಿದಿರಾ? ಅಷ್ಟೇ ಅಲ್ಲ, ಕೊಳಲಿನಲ್ಲೂ ನಾನಾ ವಿಧಗಳಿವೆ. ಶ್ರೀಕೃಷ್ಣನದು ಅಡ್ಡ ಕೊಳಲು. ಇದರಲ್ಲಿ ಧ್ವನಿ ತರಂಗ ಸುರುಳಿ ಸುರುಳಿಯಾಗಿ ಸಾಗುತ್ತ ನಾದವನ್ನು ಹೊಮ್ಮಿಸುತ್ತದೆ. ಸನಾದಿಯಂತೆ ಚಪ್ಪಟೆ ತುದಿ ಇರುವ ಕೊಳಲಿನಲ್ಲಿ ರಿಬ್ಬನ್ನಿನಂತೆ ಧ್ವನಿತರಂಗ ಸಾಗುತ್ತದೆ. ಐವತ್ತು ಸಾವಿರ ವರ್ಷಗಳ ಹಿಂದೆಯೇ ಆದಿಮಾನವರು ಕೊಳಲನ್ನು ಬಳಸುತ್ತಿದ್ದರು ಎಂಬುದಕ್ಕೆ ಸಾಕ್ಷ್ಯಗಳು ಸಿಕ್ಕಿವೆ. ಆಸ್ಟ್ರೇಲಿಯಾ ದೇಶದ ಮೂಲನಿವಾಸಿಗಳು ಬಳಸುವ ಮರದ ಕೊರಡಿನ ಕೊಳಲ ಹೆಸರು ಗೊತ್ತಿದೆಯೆ? ಡಿಜೆರಿಡೂ!






ನೆನಪಿಟ್ಟುಕೊಳ್ಳಿ, ಈ ಸಸ್ಯದ ಹೆಸರು 'ಸೀತಾ ಅಶೋಕ'. ವೈಜ್ಞಾನಿಕ ಹೆಸರು ಸರಾಕಾ ಅಶೋಕ (*Saraca asoca*). ಲಂಕೆಯ ರಾವಣ ತನ್ನ ಉದ್ಯಾನದಲ್ಲಿ ಬೆಳೆಸಿದ್ದ ಈ ವೃಕ್ಷಗಳ ನಡುವೆಯೇ ಸೀತಾಮಾತೆಯನ್ನು ಸೆರೆಯಲ್ಲಿಟ್ಟಿದ್ದ ಎಂದು ರಾಮಾಯಣದಲ್ಲಿ ವಿವರಣೆ ಬರುತ್ತದೆ. ಪರಿಮಳ ಭರಿತ ಕೆಂಪು, ಹಳದಿಯ ಗೊಂಚಲು ಗೊಂಚಲು ಹೂಗಳನ್ನು ಅರಳಿಸುವ ಈ ವೃಕ್ಷದ ಎಲೆ, ತೊಗಟೆ, ಹೂ, ಕಾಯಿ ಎಲ್ಲವೂ ಅಶೋಕಾರಿಷ್ಠ, ಅಶೋಕಾಮೃತ, ಅಶೋಕವಟಿ ಮುಂತಾದ ಆಯುರ್ವೇದ ಔಷಧಗಳಾಗಿ ಬಳಕೆಯಲ್ಲಿವೆ. ಪ್ರತಿವರ್ಷ ಭಾರತದಲ್ಲಿ ಈ ವೃಕ್ಷದ 2000 ಟನ್‌ಗಳಷ್ಟು ಬಿಡಿಭಾಗಗಳು ಔಷಧಗಳಾಗುತ್ತವೆ ಎಂಬ ಒಂದು ಅಂದಾಜು ಇದೆ. ಅನಾದಿ ಕಾಲದಿಂದಲೂ ಕವಿಗಳಿಗೆ, ಕಲಾವಿದರಿಗೆ ಪ್ರೇರಣೆ ನೀಡುತ್ತ ಬಂದ ಈ ವೃಕ್ಷ ಹಿಂದೊಂದು ಕಾಲದಲ್ಲಿ ಹಿಮಾಲಯದಿಂದ ಹಿಡಿದು ಪಶ್ಚಿಮಘಟ್ಟಗಳವರೆಗೂ ಮಳೆಕಾಡಿನಲ್ಲಿ ಬೆಳೆಯುತ್ತಿತ್ತು. ಹೆಸರಿಗೆ ತಕ್ಕಂತೆ ಶೋಕ ನಿವಾರಕ ಎನ್ನಿಸಿಕೊಂಡ ಇದು ಈಚಿನ ವರ್ಷಗಳಲ್ಲಿ ಕ್ರಮೇಣ ಕಾಣದಾಗುತ್ತಿದೆ. ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಾಲ್ಕಾರು ಅಶೋಕ ವೃಕ್ಷಗಳಿವೆ. ಅಲ್ಲಿಗೆ ಭೇಟಿ ನೀಡಿದಾಗ ಮರೆಯದೇ ನೋಡಿ ಬನ್ನಿ. ಅಂದ ಹಾಗೆ, ಎರಡು ಸಾವಿರ ಟನ್ ಎಂದರೆ ಎಷ್ಟು ಕ್ವಿಂಟಲ್, ಎಷ್ಟು ಕಿಲೊಗ್ರಾಮ್ ಎಂಬುದು ಗೊತ್ತಾ?

## ಬಣ್ಣ ಬದಲಿಸುವ ಓತಿಕ್ಯಾತ

ಗೋಸುಂಬೆಗಳು ಬಣ್ಣ ಬದಲಿಸುತ್ತವೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಅವು ನಮ್ಮ ಕಣ್ಣಿಗೆ ಕಾಣುವುದು ಅಪರೂಪ. ಏಕೆಂದರೆ ಅವು ಹಸಿರು ಕೊಂಬೆಯ ಮೇಲೆ ಹಸಿರು ಬಣ್ಣದಲ್ಲೇ ಕೂತಿರುತ್ತವೆ. ಹಳದಿಬಣ್ಣದ ಮಣ್ಣಿನಲ್ಲಿ ಓಡಾಡುವಾಗ ಮಣ್ಣಿನ ಬಣ್ಣವನ್ನೇ ಪಡೆಯುತ್ತವೆ. ಹಾಗಾಗಿ ಅವುಗಳನ್ನು ಗುರುತಿಸುವುದು ಕಷ್ಟ. ಆದರೆ ಓತಿಕ್ಯಾತಗಳನ್ನು ಗುರುತಿಸುವುದು ಸುಲಭ. ಅವು ಸಾಮಾನ್ಯವಾಗಿ ಕಟ್ಟಿಗೆಯ ಬಣ್ಣದಲ್ಲಿ ಅಥವಾ ಮಣ್ಣಿನ ಬಣ್ಣದಲ್ಲಿ ಬೇಲಿ ಗೂಟಗಳ ಮೇಲೆ ಕೂತು ತಲೆಯನ್ನು ಮೇಲಕ್ಕೂ ಕೆಳಕ್ಕೂ ಹಾಕುತ್ತಿರುತ್ತವೆ. ಮಳೆಗಾಲ ಬಂದಾಗ ಅವೂ ಬಣ್ಣ ಬದಲಿಸುತ್ತವೆ. ತಲೆಯ ಭಾಗ ಅಚ್ಚ ಕೆಂಪಾಗುತ್ತದೆ; ದೇಹದ ಇತರ ಭಾಗಗಳು ಕಪ್ಪಾಗುತ್ತವೆ. ವಿಶೇಷ ಏನೆಂದರೆ, ಗಂಡು ಓತಿಕ್ಯಾತಗಳು ಮಾತ್ರ ಹೀಗೆ ಬಣ್ಣ ಬದಲಿಸಿಕೊಂಡು ಓಡಾಡುತ್ತವೆ. ಈ ಹೊಸ ವೇಷದಲ್ಲಿ ಅವು ಹೆಣ್ಣು ಓತಿಗಳ ಜೊತೆ ದೋಸ್ತಿ ಮಾಡಲು ಹವಣಿಸುತ್ತವೆ. ಅಕ್ಟೋಬರ್ ವೇಳೆಗೆ ಹೆಣ್ಣು ಓತಿ ಮೊಟ್ಟೆ ಇಟ್ಟ ನಂತರ ಗಂಡುಗಳು ಮತ್ತೆ ಮಾಮೂಲು ಬಣ್ಣಕ್ಕೇ, ಅಂದರೆ ಮಣ್ಣಿನ ಬಣ್ಣಕ್ಕೇ ಬರುತ್ತವೆ.

ಓತಿಕ್ಯಾತಗಳನ್ನು ಕೆಲವರು ಕಂಡಲ್ಲಿ ಕಲ್ಲು ಹೊಡೆದು ಸಾಯಿಸುತ್ತಾರೆ. ಅದು ತಪ್ಪು. ಏಕೆಂದರೆ ಅವು ನಮಗೆ ಯಾವ ರೀತಿಯಲ್ಲೂ ತೊಂದರೆ ಮಾಡುವುದಿಲ್ಲ. ಬದಲಿಗೆ, ಓತಿಕ್ಯಾತ ಇದ್ದಲ್ಲಿ ಹಸಿರು ತೋಟದ ಜೀವಜಾಲ ಸಮತೋಲದಲ್ಲಿ ಇರುತ್ತದೆ. ಚಿಕ್ಕಪುಟ್ಟ ಜೇಡ, ಗೊದ್ದ ಮತ್ತು ಇತರ ಕೀಟಗಳನ್ನು ಭಕ್ಷಣೆ ಮಾಡುತ್ತ, ಅವುಗಳ ಸಂಖ್ಯೆಯನ್ನು ಒಂದು ಮಿತಿಯಲ್ಲಿ ಇಟ್ಟಿರುತ್ತೆ. ಓತಿಕ್ಯಾತಗಳ ಸಂಖ್ಯೆ ಮಿತಿ ಮೀರಿ ಹೆಚ್ಚದ ಹಾಗೆ ಹಾವು, ಉಡ, ನವಿಲು ಇವೆಲ್ಲ ಇವೆಯಲ್ಲ? ಅವಕ್ಕೂ ಊಟ ಬೇಕು ತಾನೆ?



## ವಿಕ್ರಮ್ ಲ್ಯಾಂಡರ್‌ನಲ್ಲಿ ವಿಕ್ರಮ್ ಯಾರು?



ನಮ್ಮ ದೇಶದ 'ಚಂದ್ರಯಾನ' ಸರಣಿಯ ನೌಕೆ ಇಲ್ಲಿಂದ ಹಾರಿಹೋಗಿ ಚಂದ್ರನ ಪ್ರದಕ್ಷಿಣೆ ಹಾಕುತ್ತದೆ. ಅದರ ಗರ್ಭದಿಂದ 'ವಿಕ್ರಮ್' ಹೆಸರಿನ ಪುಟ್ಟ ಯಂತ್ರವೊಂದು ಪ್ಯಾರಾಶೂಟ್ ಸಹಾಯದಿಂದ ಮೆಲ್ಲಗೆ ಚಂದ್ರನ ಮೇಲೆ ಇಳಿಯುತ್ತದೆ. ಆ ಇಳಿಬಂಟನಿಗೆ 'ವಿಕ್ರಮ್' ಎಂಬ ಹೆಸರನ್ನು ಏಕೆ ಇಟ್ಟರು ಗೊತ್ತೆ? ವಿಕ್ರಮ್ ಸಾರಾಭಾಯಿ ಎಂಬ ವಿಜ್ಞಾನಿಯೇ ನಮ್ಮ ಬಾಹ್ಯಾಕಾಶ ಸಂಸ್ಥೆ 'ಇಸ್ರೊ'ದ ಮೊದಲ ಅಧ್ಯಕ್ಷರಾಗಿದ್ದರು. ಐವತ್ತು ವರ್ಷಗಳ ಹಿಂದೆ ಅವರ ನಿರ್ದೇಶನದ ಪ್ರಕಾರ ನಮ್ಮ ದೇಶದ ಎಂಜಿನಿಯರ್‌ಗಳು ಪುಟ್ಟ ಪುಟ್ಟ ರಾಕೆಟ್‌ಗಳನ್ನು ಹಾರಿಸಲು ಪ್ರಾರಂಭಿಸಿದರು. ಈಗ ನಾವು ಚಂದ್ರನನ್ನು, ಮಂಗಳ ಗ್ರಹವನ್ನು ತಲುಪಲು ಶಕ್ತರಾಗಿದ್ದೇವೆ. ಈ ಸಾಧನೆಗೆ ಬೇಕಾದ ನೂಕುಬಲವನ್ನು ಕೊಟ್ಟಿದ್ದ ಡಾ. ವಿಕ್ರಮ್ ಸಾರಾಭಾಯಿಯವರ ಹೆಸರನ್ನೇ ಚಂದ್ರನ ಮೇಲೆ ಇಳಿಯುವ ಲ್ಯಾಂಡರ್ ಯಂತ್ರಕ್ಕೆ (ಇಳಿಬಂಟನಿಗೆ) ಇಟ್ಟಿದ್ದೇವೆ. ಆಗಸ್ಟ್ ತಿಂಗಳಲ್ಲಿ ಈ ವಿಜ್ಞಾನಿಯನ್ನು ವಿಶೇಷವಾಗಿ ನೆನಪಿಸಿಕೊಳ್ಳುತ್ತೇವೆ. ಏಕೆಂದರೆ ಅವರು ಜನಿಸಿದ್ದು 12–08–1919ರಲ್ಲಿ. ಅವರನ್ನು 'ಭಾರತದ ಬಾಹ್ಯಾಕಾಶ ಸಾಧನೆಗಳ ಪಿತಾಮಹ' ಎನ್ನುತ್ತೇವೆ. ತುಂಬಾ ಪ್ರತಿಭಾವಂತ ಆಗಿದ್ದ ಅವರು ತಮ್ಮ 50ನೇ ವಯಸ್ಸಿನಲ್ಲೇ (30–12–1971ರಂದು) ಅನಿರೀಕ್ಷಿತ ಹೃದಯಾಘಾತದಿಂದ ತೀರಿಕೊಂಡರು. ಈಗಲೂ ಬದುಕಿದ್ದಿದ್ದರೆ ಅವರಿಗೆ ಎಷ್ಟು ವಯಸ್ಸಾಗುತ್ತಿತ್ತು ಹೇಳಬಲ್ಲಿರಾ?

## ನೇಕಾರರ ಊರಿನ ವಿದ್ಯಾರ್ಥಿಗಳ ಸಾಧನೆ



ಬಿಹಾರದ ಗಯಾ ಜಿಲ್ಲೆಯಲ್ಲಿ 'ಪಟ್ವಾ ಟೋಲಿ' ಹೆಸರಿನ ಒಂದು ಊರು ಇದೆ. ಪಟ್ವಾ ಅಂದರೆ ನೇಕಾರ. ಹಾಗೆ ನೇಕಾರರೇ ಹೆಚ್ಚಾಗಿರುವ ಈ ಊರು 'ಬಿಹಾರದ ಮ್ಯಾಂಚೆಸ್ಟರ್' ಎಂದೇ ಪ್ರಸಿದ್ಧವಾಗಿದೆ. (ಇಂಗ್ಲಂಡಿನ ಮ್ಯಾಂಚೆಸ್ಟರ್ ನಗರದಲ್ಲಿ ಒಂದು ಕಾಲದಲ್ಲಿ ಜಗತ್ತಿನ ಅತಿ ಹೆಚ್ಚು ಸಂಖ್ಯೆಯ ಬಟ್ಟೆಯ ಮಗ್ಗಗಳಿದ್ದವು). ಪಟ್ವಾ ಟೋಲಿಯ ಈಗಿನ ಖ್ಯಾತಿ ಏನೆಂದರೆ, ಬಡವರು, ಕೂಲಿಕಾರರೇ ಹೆಚ್ಚಾಗಿರುವ ಇಲ್ಲಿನ ಹೈಸ್ಕೂಲ್ ವಿದ್ಯಾರ್ಥಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಐಐಟಿಗಳಿಗೆ ಪ್ರವೇಶ ಪಡೆಯುತ್ತಾರೆ. ಐಐಟಿ ಎಂದರೆ ಗೊತ್ತಲ್ಲ? ನಮ್ಮ ದೇಶದ ಅತಿಶ್ರೇಷ್ಠ ಎಂಜಿನಿಯರಿಂಗ್ ಶಿಕ್ಷಣ ನೀಡುವ ಸಂಸ್ಥೆಗಳು. ಅಲ್ಲಿಂದ ಡಿಗ್ರಿ ಪಡೆದರೆ ಜಗತ್ತಿನ ಅನೇಕ ದೇಶಗಳು ನಿಮ್ಮನ್ನು ಸ್ವಾಗತಿಸಿ ಉದ್ಯೋಗ ನೀಡುತ್ತವೆ. ನಮ್ಮ ದೇಶದಲ್ಲೂ ಉತ್ತಮ ಹುದ್ದೆ ಖಾತ್ರಿ ಸಿಗುತ್ತದೆ. ಆದರೆ ಐಐಟಿಗೆ ಪ್ರವೇಶ ಸುಲಭವಲ್ಲ. ಭಾರೀ ಶ್ರಮವಹಿಸಿ ಅಧ್ಯಯನ ಮಾಡಿ ಪರೀಕ್ಷೆಗೆ ಕಟ್ಟಬೇಕಾಗುತ್ತದೆ. ಪ್ರತಿ ವರ್ಷವೂ ಈ ಹಳ್ಳಿಯ 15–20 ವಿದ್ಯಾರ್ಥಿಗಳು ಐಐಟಿಗೆ ಪ್ರವೇಶ ಪಡೆದು, ಓದಿ ಎಂಜಿನಿಯರ್ ಆಗುತ್ತಾರೆ. ಅದಕ್ಕೆಂದು 5ನೇ ತರಗತಿಯಿಂದಲೇ ಸಿದ್ಧತೆ ನಡೆಸುತ್ತಾರೆ. ಮಗ್ಗಗಳ ಸರ್...ಭರ್ ಗಲಾಟೆಯಲ್ಲೇ ಏಕಾಗ್ರತೆಯಿಂದ ಅಧ್ಯಯನ ಮಾಡುತ್ತಾರೆ. ಈ ಊರಿನ 300 ಮನೆಗಳಲ್ಲಿ, ಪ್ರತಿ ಮನೆಯಿಂದಲೂ ಒಬ್ಬೊಬ್ಬ ಎಂಜಿನಿಯರ್ ದೇಶ ವಿದೇಶಗಳಲ್ಲಿ ಪ್ರತಿಷ್ಠಿತ ಉದ್ಯೋಗವನ್ನು ದೊರಕಿಸಿಕೊಂಡಿದ್ದಾರೆ. ಈ ಊರಿನ ಸಮೀಪದಲ್ಲೇ 'ಬೋಧಗಯಾ' ಎಂಬ ಪ್ರಸಿದ್ಧ ಪ್ರವಾಸೀ ತಾಣವಿದೆ. ಅದು ಏತಕ್ಕೆ ಪ್ರಸಿದ್ಧ ಗೊತ್ತೆ? 3000 ವರ್ಷಗಳ ಹಿಂದೆ ಅಲ್ಲೊಬ್ಬ ಮಹಾನ್ ವ್ಯಕ್ತಿ ಆಲದ ಮರದ ಕೆಳಗೆ ಏಕಾಗ್ರತೆಯಿಂದ ಧ್ಯಾನಕ್ಕೆ ಕೂತು ಜ್ಞಾನಪ್ರಾಪ್ತಿ ಮಾಡಿದ್ದ. ಯಾರು ಆ ಮಹನೀಯ, ಹೇಳಬಲ್ಲಿರಾ?

## ಸುನಿತಾ ವಿಲಿಯಮ್ಸ್: ಅಂತರಿಕ್ಷದಲ್ಲಿ ಅರ್ಧ ವರ್ಷ



ಭಾರತೀಯ ಮೂಲದ ಅಮೆರಿಕನ್ ಅಂತರಿಕ್ಷ ಸಾಧಕಿ ಸುನಿತಾ ವಿಲಿಯಮ್ಸ್ ಭೂಮಿಯಿಂದ 400 ಕಿ.ಮೀ. ಎತ್ತರದ ಬಾಹ್ಯಾಕಾಶ ನಿಲ್ದಾಣವನ್ನು ಸೇರಿದ್ದಾರೆಂದು ಕಳೆದ ಸಂಚಿಕೆಯಲ್ಲಿ ಪ್ರಕಟ ಮಾಡಿದ್ದೆವು. ಅವರನ್ನು ಕೆಳಕ್ಕೆ ತರಬೇಕಿದ್ದ ನೌಕೆಯಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಆದ್ದರಿಂದ ಪ್ರಾಯಶಃ ಮುಂದಿನ ವರ್ಷ ಫೆಬ್ರುವರಿ ತಿಂಗಳವರೆಗೂ ಅಲ್ಲೇ ಅವರು ವಾಸ ಮಾಡಲೇಬೇಕು. ಹೊಸ ನೌಕೆಯೊಂದು ನೆಲದಿಂದ ಮೇಲೇರಿ ಹೋಗಿ ಅವರನ್ನು ಸುರಕ್ಷಿತ ಕೆಳಕ್ಕೆ ಇಳಿಸಲೆಂದು ಹಾರೈಸೋಣ.

### ಗಣಿತ ರಸಪ್ರಶ್ನೆ

ಇಲ್ಲಿ ಬಲಗಡೆಯ ಅಂಕಣದಲ್ಲಿನ ಸಂಖ್ಯೆಗಳಲ್ಲಿ ಯಾವ ಎರಡು ಚೌಕಗಳ ಅಂಕಿಗಳನ್ನು ಕೂಡಿದರೆ 10 ಬರುತ್ತದೆ? ಯಾರು ಎಷ್ಟು ಬೇಗ ಹೇಳುತ್ತಾರೋ ನೋಡೋಣ. ನಿಮ್ಮ ತಾಳ್ಮೆ ಹಾಗೂ ಚುರುಕು ಬುದ್ಧಿಯ ಪರೀಕ್ಷೆ ಇದು. ಅರ್ಧಕ್ಕೇ ಬಿಟ್ಟು ಹೋಗಬೇಡಿ! ಮತ್ತು, ಆ ಎರಡು ಅಂಕಿಗಳನ್ನು ಯಾರೂ ಈ ಭಿತ್ತಿಚಿತ್ರದಲ್ಲಿ ಗುರುತು ಹಾಕಬೇಡಿ.

| | | |
|---|---|---|
| 1.69 | 1.82 | 2.91 |
| 4.67 | 4.81 | 3.05 |
| 5.82 | 5.06 | 4.28 |
| 6.36 | 5.19 | 4.57 |




ಕಳೆದ ಸಂಚಿಕೆಯ ರಸಪ್ರಶ್ನೆಗೆ ಉತ್ತರ: ಒಂದು ತಿಜೋರಿಯ ಸಂಖ್ಯಾಬೀಗದಲ್ಲಿರುವ ಎರಡು ಪ್ರಶ್ನಾರ್ಥಕ ಚಿಹ್ನೆಗಳಿದ್ದಲ್ಲಿ ಯಾವ ಅಂಕಿ ಬರಬೇಕು ಎಂದು ಕೇಳಲಾಗಿತ್ತು. ಉತ್ತರ ಸುಲಭ ತಾನೆ? ಮೇಲಿನ ಸಾಲಿನಲ್ಲಿ 1 ಮತ್ತು ಕೆಳಗಿನ ಸಾಲಿನಲ್ಲಿ 4.

ಅದಮ್ಯ ಚೇತನ
BBMP ಸಮುದಾಯ ಭವನ, ಗವಿಪುರ, ಬೆಂಗಳೂರು 560019

ಅದಮ್ಯ ಚೇತನ
Adamya Chetana

ಅದಮ್ಯಚೇತನ ಸಂಸ್ಥೆಯಿಂದ ಶಾಲಾ ಮಕ್ಕಳಿಗಾಗಿ ಪ್ರಕಾಶಿತವಾಗುವ ಗೋಡೆಪತ್ರಿಕೆ 'ಅದಮ್ಯ ಚೇತನ'.

© ಎಲ್ಲ ಹಕ್ಕುಗಳು ಅದಮ್ಯಚೇತನಕ್ಕೆ ಸೇರಿವೆ

ಸಂಪಾದಕರು: ನಾಗೇಶ ಹೆಗಡೆ ವಿನ್ಯಾಸ: ಶ್ರೀಪಾದ
ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು
https://adamyachetana.org/
ಪ್ರಕಾಶಕರು: ತೇಜಸ್ವಿನಿ ಅನಂತಕುಮಾರ, ಅದಮ್ಯ ಚೇತನ

ಸಹಯೋಗ:
ಅನಂತಕುಮಾರ ಪ್ರತಿಷ್ಠಾನ
12, ಸುಮೇರು, ಎಮ್ ಎನ್ ಕೃಷ್ಣರಾವ್ ರಸ್ತೆ,
ಬಸವನಗುಡಿ,
ಬೆಂಗಳೂರು 560004
https://akp.org.in/